Code No. **10 X(B)**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜನವರಿ / ಫೆಬ್ರವರಿ, 2020

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :*** 1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.

2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.

3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಒಬ್ಬ ಅಪ್ಪ ಮತ್ತು ಅಮ್ಮ ತಮ್ಮ ಆರು ವರ್ಷದ ಮಗನನ್ನು ಕರೆದುಕೊಂಡು ದೊಡ್ಡ ಜಾತ್ರೆಗೆ ಹೋದರು. ಹತ್ತಾರು ತೇರುಗಳು, ನೂರಾರು ಅಂಗಡಿಗಳು, ಸಾವಿರಾರು ಜನರಿಂದ ಜಾತ್ರೆಯು ಕಂಗೊಳಿಸುತ್ತಿತ್ತು. ಸಂಭ್ರಮದ ವಾತಾವರಣವಿದ್ದು, ಜನಜಂಗುಳಿಯ ಗಿಜಿಗಿಜಿಯ ಆ ಗಲಾಟೆಯಲ್ಲಿ ಸಿಕ್ಕ ತಮ್ಮೂರಿನ ನೆಂಟರೊಂದಿಗೆ ಅಮ್ಮ ಮಾತಿಗೆ ನಿಂತರು. ಅಪ್ಪನು ಮಗನ ಕೈಹಿಡಿದು ಸುತ್ತಾಡುತ್ತಿದ. ಸಂಜೆಯಾಗುವವರೆವಿಗೂ ಸುತ್ತಾಡಿ ಮಗನು ತುಂಬಾನೇ ದಣಿದಿದ್ದ. ಅಪ್ಪನು ಒಂದು ಮಿಠಾಯಿ ಅಂಗಡಿಯ ಮುಂದೆ ಬಂದು ನಿಂತಾಗ ಅಪ್ಪನ ಬಳಿ ಏನನ್ನೋ ಹೇಳುವ ಪ್ರಯತ್ನದಲ್ಲಿ ಇರುವಾಗಲೇ ಮಗನು ಮಿಠಾಯಿ ಕೊಡಿಸಲು ಹೇಳುತ್ತಿದ್ದಾನೆಂದು ತಕ್ಷಣವೇ ಅಪ್ಪ ಮಿಠಾಯಿ ಕೊಡಿಸಿ ಮಗನ ಕೈಗಿತ್ತು ತಿನ್ನುವಂತೆ ಒತ್ತಾಯಿಸಿದನು. ಮಗನು ಮಿಠಾಯಿಯನ್ನು ತಿನ್ನದೇ ಸ್ವಲ್ಪ ಮುಂದೆ ಹೋದಾಗ ಅಲ್ಲೊಂದು ಐಸ್‌ಕ್ರೀಂ ಅಂಗಡಿ ಕಾಣಿಸಿತು. ಆಗ ಆ ಹುಡುಗನು ತನ್ನ ತಂದೆಯವರ ಬಳಿ ಪುನಃ ಏನನ್ನೋ ಹೇಳಲು ಪ್ರಯತ್ನಿಸುತ್ತಿರುವಾಗ ಐಸ್‌ಕ್ರೀಂ ಮಗನ ಕೈ ಸೇರಿತ್ತು.

ಹೀಗೆ ಮುಂದೆ ಮುಂದೆ ಹೋಗುತ್ತಿದ್ದಂತೆ ದಾರಿಯಲ್ಲಿ ಬಲೂನಿನ ಅಂಗಡಿ ಕಾಣಿಸಿತು. ಆಗಲೇ ಮಗನು ಕೇಳುವ ಮೊದಲೇ ಬಣ್ಣಬಣ್ಣದ ಬಲೂನುಗಳನ್ನು ವಿವಿಧ ಆಕಾರವಿರುವಂತಹ ಬಲೂನುಗಳನ್ನು ಕೊಡಿಸಿದರು. ಇನ್ನೂ ಮುಂದೆ ಮುಂದೆ ಸಾಗುತ್ತಾ ಒಂದು ಆಟಿಕೆಯ ಅಂಗಡಿಯ ಮುಂದೆ ನಿಂತು ಮಗನಿಗೆ ಆಟಿಕೆಯನ್ನು ಕೊಡಿಸಲು ಮುಂದಾಗುತ್ತಾರೆ. ಈ ಬಾರಿ ಮಗನು

ತಡಮಾಡದೇ ತನ್ನ ಮನಸ್ಸಿನಲ್ಲಿರುವುದನ್ನು ಹೇಳಿಯೇ ಬಿಟ್ಟ. ಏನೆಂದರೆ ದಯವಿಟ್ಟು ನನ್ನ ಮಾತು ಸ್ವಲ್ಪ ಕೇಳಿರಿ ಎಂದು ಆಗಿನಿಂದಲೂ ನಂಗೆ ಸುತ್ತಾಡಿ ಸುತ್ತಾಡಿ ಸಾಕಾಗಿದೆ. ಸ್ವಲ್ಪ ಒಂದು ಕಡೆ ಕುಳಿತುಕೊಂಡು ವಿಶ್ರಾಂತಿ ತಗೋಬೇಕು ಅನ್ನಿಸುತ್ತದೆ ಎಂದಾಗ ಅಪ್ಪನಿಗೆ ಏನು ಹೇಳಲು ತೋಚದೇ ಸುಮ್ಮನೇ ಮಗನನ್ನೇ ನೋಡುತ್ತಾ ನಿಂತರು.

ಆಗ ತಂದೆಗೆ ತನ್ನ ತಪ್ಪಿನ ಅರಿವಾಯಿತು. ತಾನು ಅವನ ಮನಸ್ಸಿನಲ್ಲಿ ಏನಿದೆ ಎಂದು ತಿಳಿಯದೇ ಮಗನು ಅವುಗಳ ಅವಶ್ಯಕತೆ ಇಲ್ಲವೆಂದು ಹೇಳುವ ಪ್ರಯತ್ನ ಮಾಡಿದರೂ, ಒತ್ತಾಯಪೂರ್ವಕ ಅವನ ಇಚ್ಛೆಯ ವಿರುದ್ಧವಾಗಿ ಹೋಗಿದ್ದಕ್ಕಾಗಿ ತಂದೆಗೆ ಮುಜುಗರವಾಯಿತು. ಹಾಗೆಯೇ ಪೋಷಕರು ತಮ್ಮ ಮಕ್ಕಳು ಡಾಕ್ಟರ್ ಆಗಬೇಕು, ಇಂಜಿನಿಯರ್ ಆಗಬೇಕು, ಮತ್ತೇನೋ ಆಗಬೇಕು ಎನ್ನುತ್ತಾ ತಾವೇ ತೀರ್ಮಾನಿಸಿಬಿಡುತ್ತಾರೆ. ತಮ್ಮ ಮಕ್ಕಳ ಮನಸ್ಸಿನಲ್ಲಿ ಏನಿದೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡುವುದೇ ಇಲ್ಲ. ತಮ್ಮ ಇಷ್ಟದಂತೆ ಮಕ್ಕಳು ಇರಬೇಕೆಂದು ಒತ್ತಾಯ ಮಾಡಿ ಅವರ ಮನಸ್ಸಿನ ವಿರುದ್ಧವಾಗಿ ಹೋಗಿ ಮಕ್ಕಳ ಅವನತಿಗೆ ಪೋಷಕರೇ ಕಾರಣರಾಗುತ್ತಾರೆ. ಇನ್ನು ಮುಂದಾದರೂ ಮಕ್ಕಳ ಮುಂದಿನ ಒಳ್ಳೆಯ ಭವಿಷ್ಯಕ್ಕಾಗಿ ಪೋಷಕರು ಮಕ್ಕಳ ಮನಸ್ಸನ್ನು ಅರಿತು ನಡೆದರೆ ಮಕ್ಕಳ ಭವಿಷ್ಯವು ಉಜ್ವಲ ಆಗುವುದರಲ್ಲಿ ಸಂಶಯವೇ ಇಲ್ಲ.